# ಪ್ರೀತಿಯು ವ್ಯಾಪಾರದ ಸರಕಲ್ಲ

ಈ ಜಗತ್ತೆಂಬ ಪ್ರಕೃತಿಯು ಕೆಲವು ವಿಶಿಷ್ಟ ನಿಯಮಗಳಿಗೆ ಅನುಸಾರವಾಗಿ ನಡೆಯುತ್ತದೆ. ಆ ನಿಯಮಗಳು ಕಾರ್ಯ ಕಾರಣ ಸಂಬಂಧದಿಂದ ಕೂಡಿವೆ. ಆದರೆ ದೇವರು ಎಂಬ ಮಹಾಶಕ್ತಿಯೊಬ್ಬನು ಆ ನಿಯಮಗಳನ್ನೂ ಕಾರ್ಯಕಾರಣ ಸಂಬಂಧಗಳನ್ನೂ ಮೆಟ್ಟಿನಿಂತಿದ್ದಾನೆ. ಈ ಪ್ರಕೃತಿಯ ಕಣಕಣವನ್ನೂ ಅವನು ತುಂಬಿಕೊಂಡಿದ್ದಾನೆ. ಅವನ ಆಜ್ಞೆಯಿಂದಲೇ ಗಾಳಿ ಬೀಸುತ್ತಿದೆ, ಬೆಂಕಿ ಉರಿಯುತ್ತದೆ, ಮೋಡಗಳು ಮಳೆ ಸುರಿಸುತ್ತಿವೆ, ಮೃತ್ಯುವು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದೆ. ಆ ದೇವರು ಸರ್ವಾಂತರ್ಯಾಮಿಯೂ ಪರಿಶುದ್ಧನೂ ನಿರಾಕಾರನೂ ಸರ್ವಶಕ್ತನೂ ದಯಾಸಾಗರನೂ ಆಗಿದ್ದಾನೆ. ಅವನೇ ನಮ್ಮ ತಾಯಿಯೂ ತಂದೆಯೂ ಸ್ನೇಹಿತನೂ ಆಗಿದ್ದಾನೆ. ಜಗತ್ತಿನ ಭಾರವನ್ನು ಹೊರುವ ಅವನು ನಮ್ಮ ಬದುಕಿನ ಸಣ್ಣಭಾರಗಳನ್ನು ಹೊರಲು ನಮಗೆ ಸಹಾಯ ಮಾಡುತ್ತಾನೆ.

ಇಂತಹ ದೇವರನ್ನು ಯಾವುದೇ ಸ್ವಾರ್ಥವಿಲ್ಲದೆ ಪೂಜಿಸುವುದು ಉತ್ತಮ ಪಕ್ಷವಾಗಿದೆ. ಈ ಜನ್ಮದಲ್ಲಾಗಲೀ, ಮುಂಬರುವ ಜನ್ಮದಲ್ಲಾಗಲೀ ದೇವರು ನಮಗೆ ಬೇಕುಬೇಕಾದ ಧನಕನಕವಸ್ತುವಾಹನಗಳನ್ನು ಬಹುಮಾನವಾಗಿ ಕರುಣಿಸುತ್ತಾನೆ ಎಂಬ ಸ್ವಾರ್ಥಬುದ್ಧಿಯಿಂದ ಅವನನ್ನು ಪೂಜಿಸುವುದು ತರವಲ್ಲ. " ಈ ಜೀವನದಲ್ಲಾಗಲಿ, ಮುಂದಿನ ಜೀವನದಲ್ಲಾಗಲಿ ಸಿಕ್ಕುವ ಎಲ್ಲ ವಸ್ತುಗಳಿಗಿಂತಲೂ ನೀನೇ ನನಗೆ ಪ್ರಿಯತಮನಾಗಿದ್ದೀಯೆ" ಎಂಬ ಕಾಮನಾರಹಿತ ಬುದ್ಧಿಯಿಂದ ಪೂಜಿಸುವುದೇ ಅತ್ಯಂತ ಶ್ರೇಯಸ್ಕರವಾದುದು. ಹೀಗೆ ಉಪದೇಶಿಸಿರುವ ಸ್ವಾಮಿ ವಿವೇಕಾನಂದರು ನಿಷ್ಕಾಮಭಕ್ತಿಗೆ ಸಂಕೇತವಾಗಿ ಮಹಾಭಾರತದಲ್ಲಿ ಬರುವ ಧರ್ಮರಾಯನನ್ನು ಎತ್ತಿಹಿಡಿದಿದ್ದಾರೆ.

ಕೌರವರೊಡನೆ ಜೂಜಾಡಿಸೋತ ಧರ್ಮರಾಯನು ತನ್ನ ತಮ್ಮಂದಿರು ಮತ್ತು ದ್ರೌಪದೀಸಹಿತನಾಗಿ ಹನ್ನೆರಡು ವರ್ಷಗಳ ವನವಾಸಕ್ಕೆ ಹೋಗಬೇಕಾಯಿತು, ಪರಿಪರಿಯ ಕಷ್ಟಗಳಿಗೆ ಗುರಿಯಾಗಬೇಕಾಯಿತು. ಆ ಹೊತ್ತಿನಲ್ಲಿ ದ್ರೌಪದಿಯು ಧರ್ಮರಾಯನನ್ನು ಕುರಿತು, "ಧರ್ಮವನ್ನು ನಾವು ಕಾಪಾಡಿದರೆ ನಮ್ಮನ್ನು ಅದು ಕಾಪಾಡುತ್ತದೆ ಎಂದು ನಾನು ಕೇಳಿದ್ದೇನೆ. ನೀನು ಅರಣ್ಯವಾಸಕ್ಕೆ ಬಂದರೂ ಧರ್ಮವನ್ನು ಬಿಡದೆ ಕಾಪಾಡುತ್ತಿದ್ದೀಯೆ. ಆದರೆ ಅದಕ್ಕೆ ಪ್ರತಿಯಾಗಿ ಧರ್ಮವು ನಿನ್ನನ್ನು ಕಾಪಾಡುವಂತೆ ಕಾಣುತ್ತಿಲ್ಲ. ದೇವರು ನಮ್ಮಮೇಲೆ ಕರುಣೆತೋರದೆ, ನಮ್ಮನ್ನು ಪರರಂತೆ ಭಾವಿಸಿ, ನಮ್ಮಮೇಲೆ ಕೋಪವನ್ನೇ ಬೀರುತ್ತಿದ್ದಾನೆ. ಹಾಗಲ್ಲದಿದ್ದರೆ ಒಳ್ಳೆಯವರು ದುಃಖದಲ್ಲಿ ನವೆಯುವುದು, ಕೆಟ್ಟವರು ಸುಖದಲ್ಲಿ ಮೆರೆಯವುದು ನಡೆಯುತ್ತಿರಲಿಲ್ಲ ಇದೆಲ್ಲವನ್ನೂ ನೋಡಿದರೆ ದೇವರನ್ನು ನಿಂದಿಸೋಣವೆನಿಸುತ್ತದೆ" ಎಂದು ಸಾಕಷ್ಟು ವಿಸ್ತಾರವಾಗಿ ತನ್ನ ಅಂತರಂಗದ ಅಳಲನ್ನು ತೋಡಿಕೊಂಡಳು.

ಆಗ ಧರ್ಮರಾಯನು ಶಾಂತಮನಸ್ಕನಾಗಿಯೇ ದ್ರೌಪದಿಯನ್ನು ಕುರಿತು, "ನೀನು ನನ್ನ ರಾಣಿಯಲ್ಲವೇ, ಹೀಗೆಲ್ಲ ಕಳವಳಪಡುವುದು ನಿನಗೆ ತರವಲ್ಲ. ನಮ್ಮ ಕಣ್ಣೆದುರಿಗೆ ಹಬ್ಬಿ ಬೆಳೆದಿರುವ ಹಿಮಾಲಯಪರ್ವತದ ಆ ಶಿಖರಗಳನ್ನು ಕಣ್ಣಿಟ್ಟು ನೋಡು, ಅವು ಎಷ್ಟೊಂದು ಸುಂದರವಾಗಿವೆ, ಎಷ್ಟೊಂದು ಭವ್ಯವಾಗಿವೆ ! ನಾನು ಅವುಗಳನ್ನು ಮನಸಾರೆ ಪ್ರೀತಿಸುತ್ತೇನೆ. ಹಾಗೆ ಪ್ರೀತಿಸುವುದಕ್ಕೆ ಪ್ರತಿಯಾಗಿ ಆ ಮನೋಹರ ಶಿಖರಗಳು ನನಗೆ ಏನನ್ನೂ ಕೊಡುವುದಿಲ್ಲ, ಕೊಡಬೇಕಾಗಿಯೂ ಇಲ್ಲ. ಆದರೆ ಸುಂದರವಾಗಿರುವುದನ್ನಾಗಲಿ, ಭವ್ಯವಾಗಿರುವುದನ್ನಾಗಲಿ ಪ್ರೀತಿಸುವುದು ನನ್ನ ಸ್ವಭಾವವಾಗಿದೆ. ಈ ಸ್ವಭಾವಕ್ಕೆ ಅನುಗುಣವಾಗಿಯೇ ನಾನು ದೇವರನ್ನೂ ಪ್ರೀತಿಸುತ್ತೇನೆ. ಈ ಎಲ್ಲ ಸೌಂದರ್ಯಕ್ಕೂ ಭವ್ಯತೆಗೂ ಅವನೇ ಆಶ್ರಯಸ್ಥಾನವಾಗಿದ್ದಾನೆ. ಈ ಜಗತ್ತಿನಲ್ಲಿ ಅವನೊಬ್ಬನೇ ಪ್ರೀತಿಸಲ್ಪಡಬೇಕಾದ ವಸ್ತುವಾಗಿದ್ದಾನೆ. ಅವನ ಹೊರತಾಗಿ ನಾನು ಮತ್ತಾವುದನ್ನೂ ಅಷ್ಟು ತೀವ್ರವಾಗಿ ಪ್ರೀತಿಸುವುದಿಲ್ಲ. ನನ್ನ ಪ್ರೀತಿಗೆ ಪ್ರತಿಯಾಗಿ ನಾನು ಅವನನ್ನು ಕುರಿತು, 'ನನಗೆ ಇಂತಹ ವಸ್ತುವನ್ನು ಕೊಡು, ಅಂತಹ ವಸ್ತುವನ್ನು ಕೊಡು' ಎಂದು ಕಾಡಿ ಬೇಡುವುದಿಲ್ಲ. ಅವನು ನನ್ನನ್ನು ತನ್ನ ಇಚ್ಛೆಯಿದ್ದಂತೆ ನಡೆಸಿಕೊಳ್ಳಲಿ, ಎಲ್ಲಿ ಬೇಕೋ ಅಲ್ಲಿ ಇಡಲಿ. ಅವನು ಇಟ್ಟಹಾಗೆ ನಾನು ಇರುತ್ತೇನೆ. ಪ್ರೇಮಕ್ಕೋಸ್ಕರವಾಗಿಯಷ್ಟೇ ನಾನು ಅವನನ್ನು ಪ್ರೀತಿಸುತ್ತೇನೆ. ಪ್ರೀತಿಯನ್ನು ಮುಂದಿಟ್ಟುಕೊಂಡು ನಾನು ವ್ಯಾಪಾರಮಾಡಲಾರೆ" ಎಂದು ತಿಳುವಳಿಕೆ ಹೇಳಿದನು.

ಅದರಿಂದ ದ್ರೌಪದಿಗೆ ಕೊಂಚ ಸಮಾಧಾನವಾಯಿತು. ಧರ್ಮರಾಯನ ಈ ಮಾತುಗಳನ್ನು ಕೇಳುವಾಗ 'ನಾರದ ಭಕ್ತಿಸೂತ್ರ'ದ **'ಸಾ ತು ಅಸ್ಮಿನ್ ಪರಮ ಪ್ರೇಮರೂಪಾ'** – "ಪರಮಾತ್ಮನ ವಿಷಯದಲ್ಲಿಡುವ ಅತಿಶಯವಾದ ಪ್ರೇಮವೇ ಭಕ್ತಿಯೆನಿಸುತ್ತದೆ" ಎಂಬ ಮಾತು ನೆನಪಿಗೆ ಬರುತ್ತದೆ.

ಜೀವಾತ್ಮನು ತಾನು ಪವಿತ್ರಾತ್ಮನೇ ಆದರೂ ಪ್ರಕೃತಿಯ ಬಂಧನದಲ್ಲಿ ಸಿಲುಕಿಕೊಂಡಿದ್ದಾನೆ. ಆ ಬಂಧನದಿಂದ ಬಿಡುಗಡೆಗೊಳ್ಳುವುದೇ ಮೋಕ್ಷವೆನಿಸುತ್ತದೆ. ಮೋಕ್ಷವೆಂದರೆ ಅದು ಅಪೂರ್ಣತೆಯಿಂದ ಬಿಡುಗಡೆ; ಅದು ದುಃಖದಿಂದ ಬಿಡುಗಡೆ; ಅದು ಜನನಮರಣಗಳಿಂದ ಬಿಡುಗಡೆ. ಈ ಪರಿಯ ಬಿಡುಗಡೆಯ ಅನುಗ್ರಹಕ್ಕಾಗಿ ನಾವು ಅವನನ್ನು ಪ್ರೀತಿಸಬೇಕು, ಅವನನ್ನೇ ಪೂಜಿಸಬೇಕು ಎಂದು ವಿವೇಕಾನಂದರು ಈ ದೃಷ್ಟಾಂತದ ಕೊನೆಯಲ್ಲಿ ಉಪದೇಶಿಸಿದ್ದಾರೆ.

⌘




# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್

## ಛಾಯಾಚಿತ್ರ – ೩೬

ಈ ಚಿತ್ರ ನ್ಯೂಯಾರ್ಕ್ ನಗರದ ಪ್ರಿನ್ಸ್ ಸ್ಟುಡಿಯೋದಲ್ಲಿ ೧೮೯೫ ರಲ್ಲಿ ತೆಗೆದದ್ದು. ೧೮೯೩ ರಲ್ಲಿ ಶಿಕಾಗೋದಲ್ಲಿ ತೆಗೆದ



ಚಿತ್ರ : ೩೬

ಸ್ವಾಮೀಜಿಯ ಚಿತ್ರ ಇದೇ ಎಂದು ಬಹಳಷ್ಟು ಜನ ತಪ್ಪಾಗಿ ಭಾವಿಸಿದ್ದರು. ೧೮೯೫ರ ಹೊತ್ತಿಗೆ ನ್ಯೂಯಾರ್ಕ್‌ನಲ್ಲಿ ಸ್ವಾಮೀಜಿ ಅನೇಕ ಹೊಸ ಸ್ನೇಹಿತರನ್ನು ಸಂಪಾದಿಸಿದ್ದರು. ಹೀಗೆ ಅವರ ನಿಕಟ ಪರಿಚಯಕ್ಕೆ ಬಂದವರೆಂದರೆ, ಶ್ರೀಮತಿ ಸಾರಾ ಬುಲ್, ಡಾ. ಅಲನ್ ಡೇ, ಮಿಸ್ ಎಲೆನ್ ವಾಲ್ಡೋ, ಮಿಸ್ ಮೇರಿ ಫಿಲಿಪ್ಸ್, ಪ್ರೊ. ಜಾನ್ ಹೆನ್ರಿ ರೈಟ್, ಮಿಸ್ಟರ್ ಮತ್ತು ಮಿಸೆಸ್ ಫ್ರಾನ್ಸಿಸ್ ಲೆಗೆಟ್ ಮತ್ತು ಮಿಸ್ ಜೊಸೆಫಿನ್ ಮ್ಯಾಕ್ಲೌಡ್. ಮಿಸ್ ಮ್ಯಾಕ್ಲೌಡ್ ಸ್ವಾಮೀಜಿಯ ಅತ್ಯಂತ ಆಪ್ತ ಶಿಷ್ಯೆಯಾದಳಲ್ಲದೆ, ಕಡೆಯವರೆಗೂ ಅವರಿಗೆ ಅನೇಕ ವಿಧದಲ್ಲಿ ನೆರವಾದಳು. ಡಾ. ಎಗ್‌ಬರ್ಟ್ ಗರ್ನ್‌ಸೆ ದಂಪತಿಗಳಂತೂ ಸ್ವಾಮೀಜಿಯವರನ್ನು ತಮ್ಮ ಸ್ವಂತ ಮಗನಂತೆಯೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು.

## ಛಾಯಾಚಿತ್ರ – ೩೭

ಈ ಚಿತ್ರವನ್ನೂ ಕೂಡ ಬಹಳಷ್ಟು ಜನ, ೧೮೯೩ರಲ್ಲಿ ಶಿಕಾಗೋದಲ್ಲಿ ತೆಗೆದ ಚಿತ್ರವೆಂದು ತಪ್ಪಾಗಿ ಗುರುತಿಸಿದ್ದಾರೆ. ಏಕೆಂದರೆ ಎರಡು ಚಿತ್ರಗಳ ಮಧ್ಯೆ ಅಷ್ಟೊಂದು ಸಾಮ್ಯವಿದೆ. ಇದನ್ನು ಕೂಡ ತೆಗೆದದ್ದು ನ್ಯೂಯಾರ್ಕ್ ನಗರದ ಪ್ರಿನ್ಸ್ ಸ್ಟುಡಿಯೋದಲ್ಲಿಯೇ.

ಸ್ವಾಮೀಜಿಯವರ ವ್ಯಕ್ತಿತ್ವ, ಅವರ ಮಾತುಕತೆ, ಉಪನ್ಯಾಸಗಳು – ಇವೆಲ್ಲ ಆಳವಾದ ಪರಿಣಾಮವನ್ನು ಉಂಟುಮಾಡದ ಯಾವೊಬ್ಬ ವ್ಯಕ್ತಿಯೇ ಇಲ್ಲವೆಂಬಂತೆ ತೋರುತ್ತದೆ. ಅಲ್ಲದೆ,



ಚಿತ್ರ : ೩೭

ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಅವರು ಉಂಟುಮಾಡುವ ಪರಿಣಾಮ ಒಂದೊಂದು ರೀತಿಯದ್ದು. ಅವರ ಒಂದೇ ಒಂದು ಮಾತು, ಒಂದೇ ಒಂದು ಸ್ಪರ್ಶ, ಕಡೆಗೆ ಒಂದೇ ಒಂದು ನೋಟ